ಸಿ.ಸಿ .ನಂ. 574/2018 ಪಿಡಬ್ಲೂಃ 1

ದಿನಾಂಕಃ 08-05-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

3. ನಾನು ಕಂಪ್ಯೂಟರ್ ಸರ್ವಿಸ್ ಕೆಲಸ ಮಾಡುತ್ತೇನೆ. ಈ ಮೊದಲು ನಾನು ಬೆಂಗಳೂರಿನಲ್ಲಿ ಕೆಲಸ ಮಾಡಿರುತ್ತೇನೆ. ಬೆಂಗಳೂರಿನಲ್ಲಿ 5-6 ವರ್ಷ ಇದ್ದೆನು. 2009 ರಿಂದ 2015 ರವರೆಗೆ ಬೆಂಗಳೂರಿನಲ್ಲಿ ಇದ್ದೆ. ಬೆಂಗಳೂರಿನಲ್ಲಿದ್ದಾಗ ಊರಿಗೆ 3-4 ತಿಂಗಳಿಗೆ ವರ್ಷದಲ್ಲಿ 5-6 ಸಲ ಬರುತ್ತಿದ್ದೆ. ಬೆಂಗಳೂರಿನಲ್ಲಿ ನಾನು ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ. ಬಾನುವಾರ ರಜೆ ಇರುತ್ತಿತ್ತು . ಕೃಷ್ಣ ಪುರುಷೋತ್ತಮ ಗಾವಡಿ ನನ್ನ ಅಣ್ಣ ಇವರು ಕರೆನ್ಸಿ ಹಾಕುವುದು ಹಾಗೂ ಮನೆ ಕಟ್ಟುವ ರೆತಿ , ಜೆಲ್ಲಿ ತರಿಸಿಕೊಡುತ್ತಿದ್ದರು. ಅವರ ಉದ್ಯೋಗ ಬೇರೆ , ನನ್ನ ಉದ್ಯೋಗ ಬೇರೆ ಆಗಿತ್ತು ಎಂದರೆ ಸರಿ . ದಾಕ್ಷಾಯಿಣಿ ಚಂದ್ರಕಾಂತ ಗಾವಡಿ ಇವರು ನನ್ನ ಅಕ್ಕ ಆಗಬೇಕು. ನನ್ನ ಅಕ್ಕನ ಮದುವೆಯಾಗಿ 10-12 ವರ್ಷಗಳು ಆಗಿರುತ್ತದೆ. ನನ್ನ ಅಕ್ಕ ಬಾವ ನನ್ನ ವ್ಯವಹಾರದಲ್ಲಿ ಭಾಗಿ ಆಗುತ್ತಿರಲಿಲ್ಲ . ನನ್ನ ಅಣ್ಣ ವನ್ನಳ್ಳಿ ಸಮುದ್ರದಲ್ಲಿ ಮೀನು ಹಿಡಿಯಲು ಹೋದಾಗ ತೀರಿಕೊಂಡಿರುತ್ತಾರೆ. ಈ ಪ್ರಕರಣ ಇದೆ ಎನ್ನುವ ಬಗ್ಗೆ ನನ್ನ ಅಣ್ಣ ತೀರಿಕೊಂಡ ನಂತರ ಗೊತ್ತಾಯಿತು ಎಂದರೆ ಸರಿಯಲ್ಲ, ಮೊದಲೇ ಗೊತ್ತಿತ್ತು . ನನ್ನ ಅಣ್ಣ ಕಂಪ್ಲೆಂಟ್ ನಲ್ಲಿ ನನ್ನನ್ನಾಗಲೀ, ನನ್ನ ಅಕ್ಕಳನ್ನಾಗಲೀ ಸಾಕ್ಷಿದಾರನನ್ನಾಗಿ ತೋರಿಸಿಲ್ಲ ಎಂದರೆ ಸರಿ . ಈ ವ್ಯವಹಾರ ನನ್ನ ಅಣ್ಣ ಮಾಡಿದೆ ಎನ್ನುವ ವ್ಯವಹಾರದಲ್ಲಿ ನಾನು ಭಾಗಿಯಾಗಿರಲಿಲ್ಲ ಎಂದರೆ ಸರಿ .

4. ನಾನು ಮೊದಲನೇ ಬಾರಿ ಆರೋಪಿಯನ್ನು ಮಾರ್ಕೆಟ್ ನಲ್ಲಿ ನೋಡಿರುತ್ತೇನೆ. ದಿನಾಂಕ , ಇಸ್ವಿ ನೆನಪಿಲ್ಲ. ನನ್ನ ಅಣ್ಣ ತೀರಿಕೊಂಡ ನಂತರ ಮೊದಲನೇ ಬಾರಿ ನನ್ನನ್ನು ವಾರಸುದಾರನ್ನಾಗಿ ಯಾಕೆ ಸೇರಿಸಿಲ್ಲ ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದಲ್ಲಿ ವಾರಸುದಾರನಾಗಿ ಬಂದ ನಂತರ ಈ ಕೇಸಿನಲ್ಲಿರುವ

ದಾಖಲಾತಿಗಳ ಬಗ್ಗೆ ಹಾಗೂ ಪ್ರಕರಣದ ಬಗ್ಗೆ ತಿಳಿದುಕೊಂಡಿದ್ದೇನೆ ಎಂದರೆ ಸರಿ . ನಾನು ವಕೀಲರನ್ನು ಭೇಟಿಯಾಗಿದ್ದು ಈ ಪ್ರಕರಣದಲ್ಲಿ ನನ್ನನ್ನು ವಾರಸುದಾರನ್ನಾಗಿ ಸೇರಿಸಿದ ನಂತರ ಎಂದರೆ ಸರಿ .

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.